# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 06.08.2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(5)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 06.08.2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಜೋಗುಪಾಳ್ಯ ವಾರ್ಡ್ ಸಂಖ್ಯೆ-89 ಸಭೆ ಕೆನೋಪಿ ಹೋಟೆಲ್ ಪಿ ಯು ಕಟ್ಟಡ 2ನೇ ಮಹಡಿ ಎಂ.ಜಿ ರಸ್ತೆ, ಬೆಂಗಳೂರು** – ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯು ದಿನಾಂಕ: 06.08.2022ರಂದು ನಡೆಯಿತು.

### ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ, ಅಧ್ಯಕ್ಷರು.
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ) ಬಿಬಿಎಂಪಿ.
3) ಬಿಬಿಎಂಪಿ ಇತರ ವಿಭಾಗಗಳ ಅಂದರೆ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ ಆಶಾ ಆಲ್ಬೇನ್, ಶ್ರೀ ಶ್ರೀನಿವಾಸ ನಾಯ್ಡು, ಶ್ರೀ ಹೇಮಂತ್ ನಾಗ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಗೆ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಆಹ್ವಾನಿತರಾಗಿದ್ದ ಸ್ಥಳೀಯರು ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ ಸಮಿತಿ ಸಭೆಯಲ್ಲಿ ನೀಡಿರುವ ಈ ಕೆಳಕಂಡ ವಾರ್ಡಿನ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್ ಸಮಿತಿ ಸದಸ್ಯರಾದ ಹೇಮಂತ್ ನಾಗ್ ರವರು ಲಿಖಿತ ರೂಪದಲ್ಲಿ ಸಮಸ್ಯಗಳ ವಿವರಗಳನ್ನು ನೀಡಿರುತ್ತಾರೆ.
    - ವಾರ್ಡಿನಲ್ಲಿರುವ ಇಲ್ತೆತೋಪು ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆಯು ಸರಿಯಾಗಿ ಇಲ್ಲದಿರುವ ಕಾರಣ ಹಲಸೂರು ಪೋಲಿಸ್ ಸ್ಟೇಷನ್ ಇಂದ ಬಸವಣ್ಣ ದೇವಸ್ಥಾನದವರೆಗೆ ಚರಂಡಿಯ ನೀರು ಬಂದು ಇಲ್ತೆತೋಪು ರಸ್ತೆಯು ತಗ್ಗು ಪ್ರದೇಶದಲ್ಲಿರುವ ಕಾರಣ ಚರಂಡಿಯ ನೀರು ಇಲ್ತೆತೋಪು ರಸ್ತೆಗೆ ಹರಿದು ಬರುತ್ತದೆ ದುರಸ್ಥಿಗೊಳಿಸುವುದು ಹಾಗೂ ಮ್ಯಾನ್‌ಹೋಲ್‌ಗಳನ್ನು ಬದಲಾಯಿಸುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB ಕ್ರಮವಹಿಸುವುದು.

- ವಾರ್ಡಿನಲ್ಲಿರುವ ಸಾರ್ವಜನಿಕ ನಲ್ಲಿಗಳನ್ನು ತೆಗೆಸುವುದು ಹಾಗೂ ಅವಶ್ಯಕತೆ ಇರುವ ಜಾಗದಲ್ಲಿ ಸಾರ್ವಜಿಕ ನಲ್ಲಿಗಳನ್ನು ಅಳವಡಿಸುವುದು. – ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB ಕ್ರಮವಹಿಸುವುದು.
- ವಾರ್ಡಿನ ಮನೆಗಳಲ್ಲಿ ಹೊಸದಾಗಿ ಬೋರ್‌ವೆಲ್ ಕೋರೆಸುವುದಕ್ಕಾಗಿ ಅನುಮತಿಗಾಗಿ ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಅವರ ವಿಳಾಸವನ್ನು ಒದಗಿಸುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು BWSSB ಕ್ರಮವಹಿಸುವುದು.
- ವಾರ್ಡಿನಲ್ಲಿರುವ ಕಾರ್ಪೋರೇಷನ್ ಮೈದಾನದಿಂದ ಸರಸ್ವತಿ ಪೂರಂ 25 ಅಡಿ ಮತ್ತು ದೊಡ್ಡಯ್ಯ ಲೇಔಟ್‌ರಲ್ಲಿರುವ ರಾಜಕಾಲುವೆಯನ್ನು ಪೂನರ್‌ನಿರ್ಮಿಸುವುದು ಮತ್ತು ಹೂಲೆತ್ತುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.
- ಸಾಯಿಬಾಬ ದೇವಸ್ಥಾನ 7ನೇ ಮುಖ್ಯ ಬೀದಿಯಿಂದ ರಾಜಕಾಲುವೆಯವರಿಗೆ ಸಂಪರ್ಕಿಸುವ ರಸ್ತೆಯ ಒಳಚರಂಡಿಯ ಹೂಲೆತ್ತುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.
- ಸಲ್ಲಾಪೂರ ಅಪಾರ್ಟ್‌ಮೆಂಟ್ ರಿಂದ ರಾಜಕಾಲುವೆಯ ವರೆಗೆ ಒಳಚರಂಡಿಯು ಬ್ಲಾಕ್ ಆಗಿರುವುದು ಹಾಗೂ ಗೋಪಾಲನ್ ಅಪಾರ್ಟ್‌ಮೆಂಟ್ ಈಶ್ವರ್ ಲೇಔಟ್ ಸುತ್ತಮುತ್ತ ರಸ್ತೆಗಳಲ್ಲಿ ಹೂಲೆತ್ತುವುದು. – ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.
- ವಾರ್ಡಿನಲ್ಲಿ ಅಳವಡಿಸುವ ಸಿಸಿ ಕ್ಯಾಮರಾಗಳನ್ನು ಅರಕ್ಷಕ ಠಾಣೆಗೆ ಸಂಪರ್ಕಿಸುವುದು. – ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.
- 7ನೇ ಮುಖ್ಯ ರಸ್ತೆಯಿಂದ 10ನೇ ಮುಖ್ಯರಸ್ತೆ ಇಂದಿರಾನಗರ ಫೂಟ್‌ಪಾತ್ ಹಾಗೂ ಒಳಚರಂಡಿಯ ಕಾಮಗಾರಿ ಕೆಲಸಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.
- ಹಲಸೂರು ರೇಫರಲ್ ಆಸ್ಪತ್ರೆಯು ನವೀಕರಣಗೊಳ್ಳುತ್ತಿರುವ ಕಾರಣ ಅಲ್ಲಿಗೆ ಬರುವ ರೋಗಿಗಳಿಗೆ ತೊಂದರೆಯಾಗುತ್ತಿದ್ದು ಆಸ್ಪತ್ರೆಯವರು ಸಾರ್ವಜನಿಕರಿಗೆ ಸೂಕ್ತ ಮಾಹಿತಿಯನ್ನು ಆಸ್ಪತ್ರೇಯ ಮುಂದೆ ನಾಮಪಲಕವನು ಅಳವಡಿಸುವುದು – ರೇಫರಲ್ ಆಸ್ಪತ್ರೆಯ ಅಧಿಕಾರಿ ಕ್ರಮವಹಿಸುವುದು.
- ಬೇಸ್ಕಾಂ ರವರು ವಿದ್ಯುತ್ ಕೇಬಲ್‌ಗಳನ್ನು ಅಳವಡಿಸುವುವಾಗ ಪೂಟ್‌ಪಾತ್ ಅಧಿಕ್ರಮಿಸುವುದರಿಂದ ದುರಸ್ಥಿಗೊಳಸುವುದು. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೇಸ್ಕಾಂ ಕ್ರಮವಹಿಸುವುದು.
- ಮೈನ್ ಚಾನಲ್ ರಸ್ತೆಯಿಂದ ಹಲಸೂರು ಪೋಲಿಸ್ ಸ್ಟೇಷನ್ ರಸ್ತೆಯೊಳಗೆ ಹೂಲೆತ್ತುವುದು ಹಾಗ ದುರಸ್ಥಿಗೊಳಸುವುದು – ಸಹಾಯಕ ಕಾರ್ಯಪಾಲಕ ಅಭಿಯಂತರರು ಮೇಜರ್ ರಸ್ತೆ ಬಿಬಿಎಂಪಿ ಕ್ರಮವಹಿಸುವುದು.

- ಹಲಸೂರು ಮೇಟ್ರೋ ಸ್ಟೇಷನ್‌ರ ಹತ್ತಿರ ಒಂದು ಮೆಟಲ್ ಕ್ಯಾಬಿನ್ ಅನ್ನು ಅಳವಡಿಸಿದ್ದು ಅದನ್ನು ತೆರವುಗೊಳಿಸುವುದು. ಹಾಗೂ ಮೇಟ್ರೋ ಸ್ಟೇಷನ್ ಹತ್ತಿರ ಪಾರ್ಕ್ ಮಾಡಿರುವಂತ ವಾಹನಗಳನ್ನು ತೆರವುಗೊಳಿಸುವುದು - ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಅರಕ್ಷಕ ಸಿಬ್ಬಂಧ್ಧಿ ರವರು ಕ್ರಮವಹಿಸುವುದು.

2. ವಾರ್ಡಿನ ನಾಗರೀಕರಾದ ಬಿ.ಅಶ್ವಥ್ ನಾರಾಯಣ್ ರವರು ದೂರನ್ನು ನೀಡುತ್ತಾ ಜಿ ನಂ 2ನೇ ಬೀದಿಯಲ್ಲಿ ಮಳೆ ಬಂದಾಗ ಒಳಚರಂಡಿಯ ನೀರು ತುಂಬಿ ರಸ್ತೆಯಲ್ಲೇಲ್ಲ ಹುಕ್ಕಿ ಹರಿದು ಅಕ್ಕಪಕ್ಕದ ಮನೆಗಳಿಗೆ ಚರಂಡಿಯ ನೀರು ಬರುತ್ತದೆ, ಇದರಿಂದ ವಾಸಿಸುವ ನಾಗರೀಕರಿಗೆ ಸಮಸ್ಯೆಯಾಗುತ್ತಿದ್ದು ದುರಸ್ಥಿಗೊಳಸಬೇಕೆಂದು ಕೇಳಿರುತ್ತಾರೆ. - ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ ಕ್ರಮವಹಿಸುವುದು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು</u>,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ.